# AKKAMAHADEVI WOMEN'S UNIVERSITY, VIJAYAPURA

……………………………………………………………

**DATE: 21-11-2017**

ಪ್ರಕಟಣೆಯ ಕೃಪೆಗಾಗಿ…………

ವಿಜಯಪುರ: ಜಾಗತೀಕರಣ ವ್ಯವಸ್ಥೆಯಲ್ಲಿ ಬೇರೆ ಬೇರೆ ರಾಷ್ಟ್ರ, ಗಡಿ, ಭಾಷೆಯ ಭಿನ್ನತೆಗಳಿದ್ದರೂ ಸಹ ನಾವು ಮಾನವಿಯತೆ ದೃಷ್ಟಿಯಿಂದ ಮನುಷ್ಯ ಮನುಷ್ಯನಿಗೆ ಸ್ಪಂದಿಸಿ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ಅಗತ್ಯವಾಗಿದೆ ಎಂದು ಚಿಕ್ಕೋಡಿಯ ಎ.ಎ.ಪಾಟೀಲ ಕಲಾ ಮತ್ತು ವಾಣಿಜ್ಯ ವಿದ್ಯಾಲಯದ ರೆಡ್‌ಕ್ರಾಸ್ ಕಾರ್ಯಕ್ರಮದ ಸಂಯೋಜಕಿ ಡಾ.ಜಯಶ್ರಿ ನಾಗನಳ್ಳಿ ಹೇಳಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣ ಡಾ.ಬಿ.ಆರ್ ಅಂಬೇಡ್ಕರ ಭವನದಲ್ಲಿ ಯುತ್ ರೆಡ್‌ಕ್ರಾಸ್ ಘಟಕದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾಲಯ ಮಟ್ಟದ ರಸಪ್ರಶ್ನೆ ಸ್ಪರ್ಧೆ-2017ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೆಡ್‌ಕ್ರಾಸ್ ಎನ್ನುವುದು ಒಂದು ಜಾಗತೀಕ ವ್ಯವಸ್ಥೆ. ಕಾಲೇಜು, ವಿಶ್ವವಿದ್ಯಾಲಯ ಮಟ್ಟದಲ್ಲಿ ಯುವ ರೆಡ್‌ಕ್ರಾಸ್ ಜೀವಂತಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಡಾ.ಪದ್ಮಣ್ಣ ಪೂಜಾರಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರು ಸ್ಪರ್ಧಾರ್ಥಿಗಳಾಗಿ ಬದುಕನ್ನು ಕಟ್ಟಿಕೊಂಡು ಮುನ್ನುಗ್ಗುವ ಸ್ಪೂರ್ತಿ ಒದಗಿದೆ. ಅದರಿಂದ ಎಲ್ಲರೂ ಜಾಗತಿಕ ಮಟ್ಟದಲ್ಲಿ  ಜ್ಞಾನ ಗಳಿಸಿ ಸ್ಪರ್ಧೆಗೆ ಇಳಿಯಿರಿ ಎಂದು ಕಿವಿಮಾತು ಹೇಳಿದರು.

ಸ್ಪರ್ಧೆಯಲ್ಲಿ ವಿವಿಯ 12 ಜನ ವಿದ್ಯಾರ್ಥಿನಿಯರನ್ನು ಒಳಗೊಂಡಂತೆ ಜಮಖಂಡಿ, ಬಾಗಲಕೋಟೆ, ಹುಬ್ಬಳ್ಳಿ, ಚಿಕ್ಕೋಡಿ, ಗುಲ್ಬರ್ಗಾ, ಬೆಳಗಾವಿ, ಜಿಲ್ಲೆಯ ನೂರಕ್ಕೂ ಅಧಿಕ ಸ್ಪರ್ಧಾಳುಗಳು ಭಾಗವಹಿಸಿದ್ದರು. ಶಿಕ್ಷಣ ವಿಭಾಗದ ಪ್ರೊ.ವಿಷ್ಣು ಸಿಂಧೆ ರಸಪ್ರಶ್ನೆ ಕಾರ್ಯಕ್ರಮದ ನಿಯಮ ಮತ್ತು ಆಯ್ಕೆ ವಿಧಾನ ಕುರಿತು ವಿವರಣೆ ನೀಡಿದರು.

ರಸಪ್ರಶ್ನೆ ವಿಜೇತರು: ಜಮಖಂಡಿಯ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಾದ ಪಾರ್ವತಿ ಎಸ್. ಭದ್ರಶೆಟ್ಟಿ ಹಾಗೂ ಸವಿತಾ ಎಂ. ಅಂಗಡಿ (ಪ್ರಥಮ), ಕಲಬುರ್ಗಿಯ ಗೋದುತಾಯಿ ದೊಡ್ಡಪ್ಪ ಅಪ್ಪ ಪದವಿ ಕಾಲೇಜಿನ ಪೂಜಾ ಟಿ.ಎಚ್. ಹಾಗೂ ಅಕ್ಷತಾ ಜಿ.ಆರ್. (ದ್ವೀತಿಯ) ಸ್ಥಾನ ಪಡೆದಿದ್ದಾರೆ.

ಕಾರ್ಯಕ್ರಮದಲ್ಲಿ ಡಾ.ಉದಯಕುಮಾರ ಕುಲಕರ್ಣಿ, ಡಾ.ಸಂಜುಕುಮಾರ ಗಿರಿ, ಡಾ.ಶಶಿಕಲಾ ಪಾರಾ, ಭಾಗ್ಯಶ್ರೀ ಪಾಟೀಲ, ಸವಿತಾ ಮಡಿವಾಳ, ಜ್ಞಾನಸುಂದರಿ, ಜಿಲಾನಿ ಇನಾಮದಾರ, ರಾಘವೇಂದ್ರ ಗುರುಜಲ್ ಹಾಗೂ ಎಲ್ಲ ವಿಭಾಗದ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಪ್ರದರ್ಶಕ ಕಲೆಗಳ ವಿಭಾಗದ ವಿದ್ಯಾರ್ಥಿನಿ ಅಕ್ಷತಾ ಪ್ರಾರ್ಥಿಸಿದರು. ಯುತ್ ರೆಡ್‌ಕ್ರಾಸ್ ಘಟಕದ ನೋಡಲ್ ಅಧಿಕಾರಿ ಡಾ. ರಮೇಶ ಸೋನಕಾಂಬಳೆ ಸ್ವಾಗತಿಸಿದರು. ಪ್ರತಿಭಾ ಎಲಿಬಳ್ಳಿ ನಿರೂಪಿಸಿದರು. ಡಾ.ಶರಣಬಸವರಾಜ ವಂದಿಸಿದರು.

ಫೋಟೊ ಕ್ಯಾಪ್ಷನ್ /////

1. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣ ಡಾ.ಬಿ.ಆರ್ ಅಂಬೇಡ್ಕರ ಭವನದಲ್ಲಿ ಯುತ್ ರೆಡ್‌ಕ್ರಾಸ್ ಘಟಕದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾಲಯ ಮಟ್ಟದ ರಸಪ್ರಶ್ನೆ ಸ್ಪರ್ಧೆ-2017ರ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು.

2. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣ ಡಾ.ಬಿ.ಆರ್ ಅಂಬೇಡ್ಕರ ಭವನದಲ್ಲಿ ಯುತ್ ರೆಡ್‌ಕ್ರಾಸ್ ಘಟಕದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾಲಯ ಮಟ್ಟದ ರಸಪ್ರಶ್ನೆ ಸ್ಪರ್ಧೆ-2017ರ ಕಾರ್ಯಕ್ರಮದಲ್ಲಿ ಚಿಕ್ಕೋಡಿಯ ಎ.ಎ.ಪಾಟೀಲ ಕಲಾ ಮತ್ತು ವಾಣಿಜ್ಯ ವಿದ್ಯಾಲಯದ ರೆಡ್‌ಕ್ರಾಸ್ ಕಾರ್ಯಕ್ರಮದ ಸಂಯೋಜಕಿ ಡಾ.ಜಯಶ್ರಿ ನಾಗನಳ್ಳಿ ಮಾತನಾಡಿದರು.


AKKAMAHADEVI WOMEN'S UNIVERSITY, VIJAYAPURA
YOUTH RED CROSS UNIT
University Level Quiz Competition
Inauguration By : Prof. Sabiha
Chief Guest : Dr. L. H. Bidri
Guest : S.G.Muranal
President : Prof. S. A. Kazi
On Monday 20th November, 2017 by 10.30 am At :
Dr. Ramesh M. Sonkamble
Nodal Officer
“ I like the Religion


AKKAMAHADEVI WOMEN'S UNIVERSITY, VIJAYAPURA
YOUTH RED CROSS UNIT
Prof. Sabiha
Hon'ble Vice Chancellor
Vijayapur.
like the Religio
Teaches Libe
Equality and Fra